ದಿನಾಂಕಃ 27-02-2023

ಸಾಕ್ಷಿದಾರರಿಗೆ ಕ್ರಮಬದ್ದವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು

**ಮುಂದುವರಿದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಹೆಚ್.ಎನ್.ಬಿ.ಎನ್. ವಕೀಲರಿಂದಃ-**

ನಾನು ಹಾಜರುಪಡಿಸಿದ ಪ್ರಮಾಣ ಪತ್ರವನ್ನು ನನ್ನ ಮುಖ್ಯ ವಿಚಾರಣೆಯನ್ನಾಗಿ ಪರಿಗಣಿಸಲು ಕೋರುತ್ತೇನೆ. ಪ್ರಮಾಣ ಪತ್ರದಲ್ಲಿನ ಎಲ್ಲಾ ಅಂಶಗಳು ಸತ್ಯವಾಗಿವೆ ಮತ್ತು ಅದರಲ್ಲಿ ನನ್ನ ಸಹಿ ಇರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ.

ನಾನು ಹಾಜರುಪಡಿಸಿರುವ ದಿನಾಂಕ 25/05/2022ರ ಆಧಾರ ಪತ್ರವನ್ನು ನಿಪಿ.1 ಎಂದು ಗುರುತಿಸಲಾಯಿತು. ಸದರಿ ಪತ್ರಕ್ಕೆ ಪ್ರತಿವಾದಿಯವರು ಸಹಿ ಮಾಡಿರುತ್ತಾರೆ . ಸಾಕ್ಷಿದಾರರಾದ ಎನ್.ಆರ್.ಸುಬ್ರಹ್ಮಣ್ಯಂ ಮತ್ತು ರಾಜು ಇವರುಗಳು ಹಾಗೂ ಬಿಕ್ಲಂದಾರರಾಗಿ ಅನಂತೇಗೌಡರು ಸಹಿಗಳನ್ನು ಮಾಡಿರುತ್ತಾರೆ. ನಾನು ವಕೀಲರ ಮೂಲಕ ಕಳುಹಿಸಿದ ನೋಟೀಸಿನ ಕಛೇರಿ ಪ್ರತಿಯನ್ನು ನಿ.ಪಿ.2 ಎಂದು, ಅಂಚೆ ರಶೀತಿಗಳನ್ನು ನಿ.ಪಿ.3 ಮತ್ತು 4 ಎಂದು, ಅಂಚೆ ಸ್ವೀಕೃತಿ ಮತ್ತು ಮರಳಿ ಬಂದ ಅಂಚೆ ಲಕೋಟೆಗಳನ್ನು ನಿ.ಪಿ.5 ಮತ್ತು 6 ಎಂದು ಗುರುತಿಸಲಾಯಿತು.

ದಿನಾಂಕ 03/05/2013ರ ಕ್ರಯಪತ್ರದ ನಕಲನ್ನು ನಿಪಿ.7 ಎಂದು, ಸರ್ವೆ ನಂ.18/1, 13, 13/1, 13/2ರ ಪಹಣಿಪತ್ರಿಕೆಗಳನ್ನು ನಿ.ಪಿ.8 ರಿಂದ 11ರವರೆಗೆ ಗುರುತಿಸಲಾಯಿತು.

**ಪಾಟೀ ಸವಾಲುಃ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ತಿ.ನರಸೀಪುರ.